ಫ್ರೀಡಂ ನ್ಯೂಸ್

ಫ್ರೀಡಂ TV NEWS ಜನಸಾಮಾನ್ಯರ ಶಕ್ತಿ

# ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆ ರದ್ದು

**ನವದೆಹಲಿ, ಮೇ 12:** ದೇಶಾದ್ಯಂತ ವೈದ್ಯಕೀಯ ಶಿಕ್ಷಣ ಪ್ರವೇಶಕ್ಕಾಗಿ ಮೇ 3ರಂದು ನಡೆಸಲಾಗಿದ್ದ NEET-UG 2026 ಪರೀಕ್ಷೆಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ಅಧಿಕೃತವಾಗಿ ರದ್ದುಗೊಳಿಸಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳ ಗಂಭೀರ ಆರೋಪಗಳು ಹೊರಬಿದ್ದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಕರಣದ ಸಂಪೂರ್ಣ ತನಿಖೆಯನ್ನು ಸಿಬಿಐಗೆ (CBI) ವಹಿಸಲು ತೀರ್ಮಾನಿಸಲಾಗಿದೆ.

ರಾಜಸ್ಥಾನದ ಸೀಕರ್‌ನಲ್ಲಿ ಕೈಬರಹದಲ್ಲಿದ್ದ 140 ಪ್ರಶ್ನೆಗಳ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ. ಪರೀಕ್ಷೆಗೂ ಮುನ್ನವೇ 'ಗೆಸ್ ಪೇಪರ್' ಹೆಸರಿನಲ್ಲಿ ಪ್ರಶ್ನೆಗಳು ಹರಿದಾಡಿದ್ದವು ಎಂಬ ಆರೋಪಗಳು ಕೇಳಿಬಂದಿದ್ದು, ಇದರ ಹಿಂದೆ ದೊಡ್ಡ ಮಟ್ಟದ ಸಂಘಟಿತ ಜಾಲವಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ. ಈಗಾಗಲೇ ರಾಜಸ್ಥಾನದ ವಿಶೇಷ ಕಾರ್ಯಾಚರಣೆ ಗುಂಪು (SOG) ತನಿಖೆ ಆರಂಭಿಸಿತ್ತು. ಬಳಿಕ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿದೆ.


ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ 45 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಹೇಗೆ ನಡೆಯಿತು? ಪರೀಕ್ಷಾ ಕೇಂದ್ರಗಳ ಸಿಬ್ಬಂದಿ ಅಥವಾ ಹೊರಗಿನ ಜಾಲಗಳ ಪಾತ್ರ ಇದೆಯೇ? ಎಂಬ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಯಲಿದೆ. NTA ಕೂಡ ತನಿಖಾ ಸಂಸ್ಥೆಗಳಿಗೆ ಅಗತ್ಯ ದಾಖಲೆಗಳು ಮತ್ತು ಡಿಜಿಟಲ್ ದತ್ತಾಂಶಗಳನ್ನು ಒದಗಿಸಿ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದೆ.

ಮೇ 3ರಂದು ನಡೆದಿದ್ದ ಸಂಪೂರ್ಣ ಪರೀಕ್ಷೆಯನ್ನು ಇದೀಗ ಅಮಾನ್ಯಗೊಳಿಸಲಾಗಿದ್ದು, ಮರು ಪರೀಕ್ಷೆ ನಡೆಸಲು ಸಿದ್ಧತೆ ಆರಂಭವಾಗಿದೆ. ಹೊಸ ಪರೀಕ್ಷಾ ದಿನಾಂಕ, ಪ್ರವೇಶ ಪತ್ರ ಮತ್ತು ಪರೀಕ್ಷಾ ಮಾರ್ಗಸೂಚಿಗಳ ಬಗ್ಗೆ ಶೀಘ್ರದಲ್ಲೇ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಹೊರಬೀಳಲಿದೆ ಎಂದು NTA ಸ್ಪಷ್ಟಪಡಿಸಿದೆ.

ಮರು ಪರೀಕ್ಷೆಗೆ ವಿದ್ಯಾರ್ಥಿಗಳು ಯಾವುದೇ ಹೆಚ್ಚುವರಿ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಈಗಾಗಲೇ ಸಲ್ಲಿಸಿರುವ ಅರ್ಜಿಗಳು ಮತ್ತು ಆಯ್ಕೆ ಮಾಡಿಕೊಂಡಿರುವ ಪರೀಕ್ಷಾ ಕೇಂದ್ರಗಳೇ ಮಾನ್ಯವಾಗಿರಲಿವೆ. ವಿದ್ಯಾರ್ಥಿಗಳು ಮತ್ತೆ ಅರ್ಜಿ ಸಲ್ಲಿಸುವ ಅವಶ್ಯಕತೆಯಿಲ್ಲ ಎಂದು NTA ತಿಳಿಸಿದೆ.

ಸುಮಾರು 22.79 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ವರ್ಷ NEET-UG ಪರೀಕ್ಷೆ ಬರೆದಿದ್ದರು. ಪರೀಕ್ಷೆ ರದ್ದಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಮನೆಮಾಡಿದೆ. ಈ ನಡುವೆ ಯಾವುದೇ ಗೊಂದಲಗಳಿದ್ದಲ್ಲಿ ಸಂಪರ್ಕಿಸಲು NTA ವಿಶೇಷ ಸಹಾಯವಾಣಿ ಸಂಖ್ಯೆಗಳನ್ನೂ ಬಿಡುಗಡೆ ಮಾಡಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ಗಂಭೀರ ಅಕ್ರಮಗಳು ದೇಶದ ಅತಿ ದೊಡ್ಡ ಸ್ಪರ್ಧಾತ್ಮಕ ಪರೀಕ್ಷೆಗಳ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುವಂತಾಗಿದ್ದು, ಶಿಕ್ಷಣ ವ್ಯವಸ್ಥೆಯ ಪಾರದರ್ಶಕತೆ ಕುರಿತು ಮತ್ತೊಮ್ಮೆ ಚರ್ಚೆ ಆರಂಭವಾಗಿದೆ.



# ಸಮರ್ಥ್‌ಗೆ ಚಮಚಾಗಿರಿ.. ಕಾಂತ್ ಕುಮಾರ್ ದಸ್ತಗಿರಿ...!

# ಪ್ರಜೆಗಳ ಮೇಲೆ ಕುಟುಂಬ ರಾಜಕಾರಣದ ಕ್ರೂರ ಸವಾರಿ..!

## EDITORIAL








ಇವರು ಒಂದೇ ವಯಸ್ಸಿನ ಇಬ್ಬರು ಯುವಕರು. ಇಬ್ಬರೂ ಪದವಿ ಮುಗಿಸಿ ಉದ್ಯೋಗ ಹುಡುಕುತ್ತಿದ್ದವರು. ಒಬ್ಬ ಧಾರವಾಡದ ಕಾಂತ್ ಕುಮಾರ್, ಮತ್ತೊಬ್ಬ ದಾವಣಗೆರೆಯ ಸಮರ್ಥ್. ಕಾಂತ್ ಕುಮಾರ್‌ಗೆ ಕೆಲಸ ಸಿಗದ ಕಾರಣ ಚಳವಳಿ ಮಾಡುತ್ತಿದ್ದಾನೆ. ನಿನ್ನೆ ಆತನನ್ನು ಧಾರವಾಡ ಎಸ್ಪಿ ಶಶಿಕುಮಾರ್ ನೇತೃತ್ವದಲ್ಲಿ ಅವರು ಒಬ್ಬ ಮೂರನೇ ದರ್ಜೆಯ ಕ್ರಿಮಿನಲ್‌ನಂತೆ ದಸ್ತಗಿರಿ ಮಾಡಿ ಹೊತ್ತೊಯ್ಯುತ್ತಿದ್ದರು.

ಆದರೆ ಸಮರ್ಥ್? ಇವರು ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ. ತಂದೆ ಮಂತ್ರಿ, ತಾಯಿ ಸಂಸದೆ. ಹಾಗಾಗಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಗೆದ್ದು ಶಾಸಕರಾಗಿಬಿಟ್ಟಿದ್ದಾರೆ. ಇವರನ್ನು ಜಿಲ್ಲಾ ಎಸ್ಪಿ ಶೇಖರ್ ಟೆಕ್ಕಣ್ಣವರ್ ಮತ್ತು ಸಿಇಒ ಅವರು ಭೇಟಿ ಮಾಡಿ, ಶುಭಕೋರಿ (ವಿಶ್ ಮಾಡಿ) ಸಲಾಮು ಹೊಡೆಯುತ್ತಿದ್ದಾರೆ.

ಸಾಮಾನ್ಯರ ಮೇಲೆ ಮತ್ತು ನ್ಯಾಯ ಕೇಳುವ ಜನರ ಮೇಲೆ ಅಟ್ಟಹಾಸ ಮೆರೆಯುವ ಅಧಿಕಾರಿಗಳು, ಅಧಿಕಾರಶಾಹಿ ರಾಜಕಾರಣಿಗಳ ಕಾಲೊತ್ತಲು ಸದಾ ಸಿದ್ಧವಿರುತ್ತಾರೆ. ಎಸ್ಪಿ, ಡಿಸಿ, ಸಿಇಒ ಹುದ್ದೆಗಳು ಶಾಸಕರಿಗಿಂತ ಹೆಚ್ಚು ಜವಾಬ್ದಾರಿ ಮತ್ತು ಅಧಿಕಾರವುಳ್ಳ ಸ್ಥಾನಗಳು. ನಿಯಮದ ಪ್ರಕಾರ ಅವರು ಅನೇಕ ವಿಷಯಗಳಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಹೊಂದಿದ್ದಾರೆ. ಆದರೆ 27 ವರ್ಷದ ಯುವ ಶಾಸಕನ ಎದುರು ಅವರು ಸಲಾಮು ಹೊಡೆಯುವಂತಹ ಅನಿವಾರ್ಯತೆ ಬಂದಿರುವುದು ಕಾರ್ಯಾಂಗದ ದುಸ್ಥಿತಿಗೆ ಹಿಡಿದ ಕನ್ನಡಿ.

ದಾವಣಗೆರೆ ಪ್ರೆಸ್ ಕ್ಲಬ್‌ನಲ್ಲಿ ಪತ್ರಕರ್ತರ ಒಂದು ಪ್ರಶ್ನೆಗೂ ಉತ್ತರ ಕೊಡಲಾಗದ ಎಳೆಯ ಶಾಸಕ; ಸಿಎಂ, ಸಚಿವರು ಹಾಗೂ ಅಧಿಕಾರಿಗಳ ಸನ್ಮಾನಕ್ಕೆ ಪಾತ್ರರಾಗುತ್ತಿದ್ದಾರೆ. ಇತ್ತ ಸಂಘಟನೆ ಮಾಡಿ, ಹೋರಾಟ ಕಟ್ಟಿ ನಿರುದ್ಯೋಗಿಗಳಿಗೆ ನ್ಯಾಯ ಕೇಳುವ ಕಾಂತ್ ಕುಮಾರ್ ಅಂತಹವರು ಪೊಲೀಸರ ಏಟು ತಿನ್ನಲಷ್ಟೇ ಸೀಮಿತವಾಗುತ್ತಿರುವುದು ನಮ್ಮ ಸರ್ಕಾರಗಳ ಆದ್ಯತೆಗೆ ಸಾಕ್ಷಿ.

ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಬಿಹಾರದಲ್ಲಿ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಹಾಗೂ ನಿತೀಶ್ ಕುಮಾರ್ ಸಚಿವ ಸಂಪುಟದ ಉಪೇಂದ್ರ ಕುಶ್ವಾಹ ಅವರ ಮಕ್ಕಳು ಚುನಾವಣೆಗೆ ನಿಲ್ಲದೆಯೇ ಮಂತ್ರಿಗಳಾಗಿ ಮಿಂಚುತ್ತಿದ್ದಾರೆ. ಅಲ್ಲಿಯೂ ಹಿರಿಯ ಅಧಿಕಾರಿಗಳು ಈ ಯುವಕರ ಮುಂದೆ ಡೊಗ್ಗು ಸಲಾಮು ಹೊಡೆಯುತ್ತಿದ್ದಾರೆ. ಜನರ ಒಂದು ಮತವನ್ನೂ ಪಡೆಯದೆ ಕೇವಲ ಕುಟುಂಬದ ಪ್ರಭಾವದಿಂದಲೇ ಅಧಿಕಾರಕ್ಕೆ ಬರುವುದು ಈಗ ಸಾಮಾನ್ಯವಾಗುತ್ತಿದೆ.

ಇದು ಪ್ರಜಾಪ್ರಭುತ್ವಕ್ಕೆ ಅಪಾಯ. ಪ್ರತಿಭೆಗೆ ಬೆಲೆ ಇಲ್ಲದೆ, ಕೇವಲ ಕುಟುಂಬದ ಹೆಸರಿಗೆ ಬೆಲೆ ಬರುತ್ತಿರುವುದು ದೇಶದ ಯುವಜನಾಂಗವನ್ನು ನಿರಾಸೆಗೆ ತಳ್ಳುತ್ತಿದೆ. ಕಾಂತ್ ಕುಮಾರ್‌ನಂತಹ ಸಾವಿರಾರು ಯುವಕರು ಕೆಲಸಕ್ಕಾಗಿ ಹೋರಾಡುತ್ತಿರುವಾಗ, ಕೆಲವರು ಕುಟುಂಬದ ಆಶ್ರಯದಲ್ಲಿ ಸುಲಭವಾಗಿ ಅಧಿಕಾರದ ಸಿಂಹಾಸನ ಏರುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಅಸಮಾನತೆಯ ಕಿಚ್ಚು ಬೆಳೆಯುವುದು ಸಹಜ.
ತಾವಿಬ್ಬರೇ ಎಂದು ಮರೆಯುತ್ತಿದ್ದ ಡಿಎಂಕೆ ಮತ್ತು ಎಐಎಡಿಎಂಕೆ ಗಳನ್ನು ತಮಿಳುನಾಡಿನ ಜನ ಉಗಿದಟ್ಟಿದಂತೆ.  ರಾಜಕೀಯೇತರ ವ್ಯಕ್ತಿ ನಟ ವಿಜಯ್ ರನ್ನು ಮುಖ್ಯಮಂತ್ರಿ ಮಾಡಿದಂತೆ..ಇಂಥ ಕುಟುಂಬ ರಾಜಕಾರಣಿಗಳ ಸೊಕ್ಕನ್ನು ಸಮಾಜವೇ ಮುರಿಯಬೇಕು.

Two young men of the same age represent two completely different realities of modern India. One is Kanth Kumar from Dharwad, a graduate struggling to secure employment. Frustrated by unemployment and the lack of opportunities, he has been actively protesting and raising his voice for jobless youth. Recently, under the leadership of Dharwad SP Shashikumar, he was arrested and dragged away as though he were a hardened criminal. His only “mistake” was demanding justice and employment opportunities.
The other young man is Samarth from Davanagere, grandson of senior politician Shamanur Shivashankarappa. With a minister as his father and a Member of Parliament as his mother, Samarth has effortlessly risen to power as the MLA of Davanagere South. Senior district officials, including the SP and CEO, personally visited him, greeted him warmly, and saluted him with respect.
This contrast exposes the painful reality of our political and administrative system. Officers who often behave harshly toward ordinary citizens and protesters appear submissive before members of influential political families. Although positions such as SP, DC, and CEO carry significant constitutional authority and responsibility, many officials seem compelled to bend before young political heirs who have inherited power through family influence.
This phenomenon is not limited to Karnataka alone. Across India, dynastic politics continues to dominate public life. In several states, children and relatives of powerful politicians gain authority and influence without proving themselves before the people. Meanwhile, talented and hardworking youth continue to struggle for basic opportunities and employment.
Such a system is dangerous for democracy. When merit loses importance and family background becomes the main qualification for power, frustration among ordinary youth naturally increases. A strong democracy must value talent, hard work, and public service—not inherited privilege and political legacy.

# ಧರ್ಮಸ್ಥಳ ಬುರುಡೆ ಕೇಸ್: 10 ತಿಂಗಳಾದರೂ ಕೆಲಸಗಾರರ ಕೈ ಸೇರದ ಕೂಲಿ ಹಣ, ವಾಹನಗಳ ಬಾಡಿಗೆ




ಮಂಗಳೂರು, ಮೇ 12: ರಾಜ್ಯದಾದ್ಯಂತ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಧರ್ಮಸ್ಥಳ ಬುರುಡೆ ಪ್ರಕರಣ ಇದೀಗ ಮತ್ತೊಮ್ಮೆ ಸುದ್ದಿಯಲ್ಲಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದಿದ್ದ ಉತ್ಖನನ ಕಾರ್ಯಾಚರಣೆಯಲ್ಲಿ ದುಡಿದ ಕಾರ್ಮಿಕರು ಹಾಗೂ ಯಂತ್ರೋಪಕರಣಗಳ ಮಾಲೀಕರು ಕಳೆದ 10 ತಿಂಗಳಿಂದ ತಮ್ಮ ಹಣಕ್ಕಾಗಿ ಅಲೆದಾಡುವ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

“ನೂರಾರು ಹೆಣಗಳನ್ನು ಹೂತಿದ್ದೇನೆ” ಎಂಬ ಚಿನ್ನಯ್ಯನ ಹೇಳಿಕೆಯ ಹಿನ್ನೆಲೆ 2025ರ ಜುಲೈ 29ರಿಂದ ಆಗಸ್ಟ್ 13ರವರೆಗೆ ಒಟ್ಟು 17 ಸ್ಥಳಗಳಲ್ಲಿ ಉತ್ಖನನ ಕಾರ್ಯಾಚರಣೆ ನಡೆಸಲಾಗಿತ್ತು. ಎಸ್‌ಐಟಿ ಸೂಚನೆಯಂತೆ ಹಗಲು-ರಾತ್ರಿ ಲೆಕ್ಕಿಸದೇ ಕಾರ್ಮಿಕರು, ವಾಹನ ಚಾಲಕರು ಹಾಗೂ ಯಂತ್ರೋಪಕರಣಗಳ ಮಾಲೀಕರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಆದರೆ ಕಾರ್ಯಾಚರಣೆ ಪೂರ್ಣಗೊಂಡು ಸುಮಾರು 10 ತಿಂಗಳು ಕಳೆದರೂ ಕೂಲಿ ಮತ್ತು ಬಾಡಿಗೆ ಹಣ ಇನ್ನೂ ಪಾವತಿಯಾಗಿಲ್ಲ ಎನ್ನಲಾಗಿದೆ.

ಜೆಸಿಬಿ ಹಾಗೂ ಹಿಟಾಚಿ ಯಂತ್ರಗಳ ಬಾಡಿಗೆ, ಕಾರ್ಮಿಕರ ಕೂಲಿ, ಶಾಮಿಯಾನ, ಹಾರೆ, ಪಿಕಾಸು, ಕುಡಿಯುವ ನೀರು ಮತ್ತು ವಾಹನಗಳ ವೆಚ್ಚ ಸೇರಿ ಒಟ್ಟು 2 ಲಕ್ಷ ರೂಪಾಯಿಗೂ ಅಧಿಕ ಹಣ ಬಾಕಿಯಿದೆ ಎಂದು ಸಂಬಂಧಪಟ್ಟವರು ಆರೋಪಿಸಿದ್ದಾರೆ. ಅದರಲ್ಲೂ ಜೆಸಿಬಿ ಬಾಡಿಗೆಯೇ 71,500 ರೂಪಾಯಿ ಬಾಕಿಯಿದ್ದು, ಕಾರ್ಮಿಕರ ಕೂಲಿ ಮೊತ್ತ ಸುಮಾರು 80 ಸಾವಿರ ರೂಪಾಯಿ ಎಂದು ತಿಳಿದುಬಂದಿದೆ.

ಉತ್ಖನನ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಸುನೀಲ್ ಕನ್ಯಾಡಿ ಎಂಬವರ ಹಿಟಾಚಿ ಯಂತ್ರವನ್ನು ನಿರಂತರವಾಗಿ ಬಳಸಲಾಗಿತ್ತು. ಕೇವಲ 10 ದಿನ ಮಾತ್ರ ಯಂತ್ರ ಕಾರ್ಯನಿರ್ವಹಿಸಿದ್ದರೂ, 15 ದಿನಗಳ ಕಾಲ ಸ್ಥಳದಲ್ಲೇ ಕಾಯ್ದಿರಿಸಲಾಗಿತ್ತು. ಬಳಸಿದ ದಿನಗಳಷ್ಟೇ ಬಿಲ್ ನೀಡುವಂತೆ ಮಾಲೀಕರು ಮನವಿ ಮಾಡಿಕೊಂಡಿದ್ದರೂ, ಕಳೆದ ಹಲವು ತಿಂಗಳಿಂದ ಹಣ ಪಾವತಿಯಾಗಿಲ್ಲ ಎಂಬ ಬೇಸರ ವ್ಯಕ್ತವಾಗಿದೆ.

ಹಣ ಪಾವತಿ ವಿಚಾರದಲ್ಲಿ ಧರ್ಮಸ್ಥಳ ಗ್ರಾಮ ಪಂಚಾಯತ್ ಮತ್ತು ಎಸ್‌ಐಟಿ ನಡುವೆ ಗೊಂದಲ ಉಂಟಾಗಿದೆ ಎನ್ನಲಾಗಿದೆ. ಗ್ರಾಮ ಪಂಚಾಯತ್ ಅಧಿಕಾರಿಗಳನ್ನು ಸಂಪರ್ಕಿಸಿದರೆ ಎಸ್‌ಐಟಿಯತ್ತ ಬೆರಳು ತೋರಿಸಲಾಗುತ್ತಿದೆ. ಇತ್ತ ಎಸ್‌ಐಟಿ ಅಧಿಕಾರಿಗಳು “ನವೆಂಬರ್‌ನಲ್ಲೇ ಹಣ ಬಿಡುಗಡೆ ಮಾಡಲಾಗಿದೆ” ಎಂದು ಉತ್ತರಿಸುತ್ತಿದ್ದಾರೆ ಎನ್ನಲಾಗಿದೆ. “ಯಂತ್ರಗಳನ್ನು ಬಾಡಿಗೆಗೆ ಕೇಳಿದ್ದು ಪಂಚಾಯತ್. ಹೀಗಾಗಿ ನಾವು ಎಸ್‌ಐಟಿ ಬಳಿ ನೇರವಾಗಿ ಹಣ ಕೇಳಲು ಸಾಧ್ಯವಿಲ್ಲ” ಎಂದು ವಾಹನ ಮತ್ತು ಯಂತ್ರೋಪಕರಣಗಳ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉತ್ಖನನ ಕಾರ್ಯದ ವೇಳೆ ಕರ್ತವ್ಯದಲ್ಲಿದ್ದ ಪಂಚಾಯತ್ ಪಿಡಿಒ ಕೂಡ ಇದೀಗ ನಿವೃತ್ತರಾಗಿದ್ದು, ಬಾಕಿ ಹಣದ ಸಮಸ್ಯೆ ಇನ್ನಷ್ಟು ಗೊಂದಲಕ್ಕೀಡಾಗಿದೆ. ಮಳೆ-ಬಿಸಿಲು ಲೆಕ್ಕಿಸದೇ ದುಡಿದ ಕಾರ್ಮಿಕರು ಮತ್ತು ಮಾಲೀಕರಿಗೆ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವೇ ಬಾಕಿ ಹಣ ಪಾವತಿಸಬೇಕು ಎಂಬ ಆಗ್ರಹ ಕೇಳಿಬಂದಿದೆ.